ಇ) ಈ ರಸ್ತೆಗಳು ಎಷ್ಟು ಕಿ.ಮೀ. ಉದ್ದವಿರುತ್ತವೆ ಹಾಗೂ ಈ ರಸ್ತೆಗಳನ್ನು ರಾಜ್ಯ ಹೆದ್ದಾರಿ ರಸ್ತೆ ಮಾಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೆಲವು ಪ್ರಮುಖ ಜಿಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 1806 ಸಂಖ್ಯೆ ಜಿಲ್ಲಾ ಮುಖ್ಯ ರಸ್ತೆಗಳಿದ್ದು, ಇವುಗಳ ಉದ್ದ 28,247 ಕಿ.ಮೀ.

ಆ) ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಇ) ಈ ರಸ್ತೆಗಳ ಒಟ್ಟು ಉದ್ದಳತೆ 124.30 ಕಿ.ಮೀ. ಇದ್ದು ವಿವರ ಈ ಕೆಳಗಿನಿಂತಿದೆ

1.	ಬೈಲಹೊಂಗಲದಿಂದ ಎಲ್ಲಮ್ಮನ ಗುಡ್ಡ ವಯಾ ಹೊಸೂರ (ಅ) ಬೈಲಹೊಂಗಲ ಉಪವಿಭಾಗ	2.10 ಕಿ.ಮೀ
ಬ.	ಸವದತ್ತಿ ಉಪವಿಭಾಗ	50.40 ಕಿ.ಮೀ
2.	ಬೈಲಹೊಂಗಲ ಯಲ್ಲಮ್ಮನ ಗುಡ್ಡ ವಯಾ ಬೆಳವಡಿ ಉಡಿಕೇರಿ	
ಅ)	ಬೈಲಹೊಂಗಲ ಉಪವಿಭಾಗ	13.00 ಕಿ.ಮೀ
ಬ)	ಬೈಲಹೊಂಗಲ ಗೋಕಾಕ ವಯಾ ಮುತಗೋಡ ಹಿರೇಬೂದನೂರು	
ಅ)	ಬೈಲಹೊಂಗಲ ಉಪವಿಭಾಗ	2.10 ಕಿ.ಮೀ
ಬ)	ಸವದತ್ತಿ ಉಪವಿಭಾಗ	14.00 ಕಿ.ಮೀ
		124.30 ಕಿ.ಮೀ

ರಾಜ್ಯ ಹೆದ್ದಾರಿಗಳಾಗಿ ಪರಿವರ್ತಿಸುವ ಸಮಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳ ಕುರಿತು

1075 (1199) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ 1999-2000 ಹಾಗೂ 2000-01ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಹಾಗೂ ಪಶುಕೇಂದ್ರಗಳನ್ನು ಪ್ರಾರಂಭಿಸಲಾಗಿದೆ (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) 1999-2000 ಹಾಗೂ 2000-2001ನೇ ಸಾಲಿನಲ್ಲಿ ಬೆಳಗಾಂವ್ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಹಾಗೂ ಪಶುಕೇಂದ್ರಗಳನ್ನು ತೆರೆಯಲಾಗಿದೆ? ತಾಲ್ಲೂಕುವಾರು ವಿವರ ನೀಡುವುದು?

ಇ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಗ್ರಾಮದಲ್ಲಿ ಮತ್ತು ಸವದತ್ತಿ ತಾಲ್ಲೂಕಿನ ಸುಗಟ್ಟಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುವುದೇ?

ಈ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮಗಳಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶುಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದೇ?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಇ(ಂ),

ಈ) ಪ್ರಾರ್ಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ

ಬೆಳಗಾಂವ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ತೆಗೆದುಕೊಂಡ ಕೆಲಸ

1076 (1200) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ 1999-2000 ಹಾಗೂ 2000-2001ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಎಷ್ಟು ಮೊತ್ತದ ಕೆಲಸವನ್ನು ತೆಗೆದುಕೊಳ್ಳಲಾಗಿದೆ. ಜಿಲ್ಲಾವಾರು ಮಾಹಿತಿ ನೀಡುವುದು

ಆ) ಸನ್ 1999-2000 ಹಾಗೂ 2000-2001ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಎಷ್ಟು ಮೊತ್ತದ ಕೆಲಸವನ್ನು ತೆಗೆದುಕೊಳ್ಳಲಾಗಿದೆ; ತಾಲ್ಲೂಕುವಾರು ವಿವರ ನೀಡುವುದು ಹಾಗೂ ಕೆಲಸದ ವಿವರ ನೀಡುವುದು;

ಇ) ಬೆಳಗಾಂವ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ತೆಗೆದುಕೊಂಡ ಕೆಲಸಗಳಿಗೆ ಇದುವರೆವಿಗೂ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಮಂಜೂರಾತಿ ನೀಡಲು ವಿಳಂಬವಾಗುತ್ತಿರುವ ಕಾರಣಗಳೇನು; ಪೂರ್ಣ ವಿವರ ನೀಡುವುದು;

ಈ) ಬೆಳಗಾಂವ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಕೆಲಸಗಳು ಮಂಜೂರಾತಿಯನ್ನು ಪಡೆದಿದ್ದರೂ ಪ್ರಾರಂಭವಾಗದಿರಲು ಕಾರಣವೇನು; ಪೂರ್ಣ ವಿವರ ನೀಡುವುದು?